**ದಿನಾಂಕಃ 17–10–2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ ಅದರಲ್ಲಿ ಬರೆದಿರುವ ವಿಷಯಗಳು ನಾನೇ ಹೇಳಿ ಬರೆಸಿದ್ದೇನೆ. ಸದರಿ ಸಂಗತಿಗಳು ಸತ್ಯದಿಂದ ಕೂಡಿರುತ್ತವೆ.

**ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಪಿ ವಿ ಕೆ ವಕೀಲರಿಂದಃ**

ಅಪಘಾತಕ್ಕೆ ಸಂಬಂಧಿಸಿದ ಪ್ರ.ವ.ವರದಿಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ –1 ಎಂದು, ಪಿರ್ಯಾದಿಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ –2 ಎಂದು, ಸ್ಥಳ ಪಂಚನಾಮೆಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ –3 ಎಂದು, ವಾಹನದ ಜಪ್ತಿ ಪಂಚನಾಮೆ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ –4 ಎಂದು, ಐಎಂವಿ ವರದಿಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ –5 ಎಂದು, ದೋಷಾರೋಪಣೆ ಪಟ್ಟಿಯ ದೃಡೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಪಿ –6 ಎಂದು, ಪಿಡ್ ಬ್ಯಾಕ್ ಸರ್ಟಿಪಿಕೇಟ್ ನ್ನು ನಿ ಪಿ – 7 ಎಂದು, ಡಿಸ್ಚಾರ್ಜ ಸಮ್ಮರಿಯನ್ನು ನಿ ಪಿ –8 ಎಂದು, ಪೋಲಿಸ್ ನೋಟಿಸಿಗೆ ಉತ್ತರವನ್ನು ನಿ ಪಿ –9 ಎಂದು, 47 ಮೆಡಿಕಲ್ ಬಿಲ್ಲುಗಳನ್ನು ತಕರಾರಿಗೆ ಒಳಪಟ್ಟು ಒಟ್ಟಾಗಿ ನಿಪಿ –10 ಎಂದು, 45 ಔಷಧಿ ಸಲಹಾ ಚೀಟಿಗಳನ್ನು ಒಟ್ಟಾಗಿ ನಿ ಪಿ –11 ಎಂದು, 6 ಕಲರ್ ಪೋಟೋಗಳನ್ನು ಒಟ್ಟಾಗಿ ನಿ ಪಿ – 12 ಎಂದು, ಸಿಡಿಯನ್ನು ನಿ ಪಿ –13 ಎಂದು ಗುರುತಿಸಲಾಯಿತು.

ಅರ್ಜಿದಾರರ ಮೂಲ ಆದಾರ ಕಾರ್ಡ, ಪ್ಯಾನ್ ಕಾರ್ಡ, ಬ್ಯಾಂಕ್ ಪಾಸ್ ಬುಕ್ ಮೂಲ ದಾಖಲೆಗಳ ಜೊತೆ ಅವುಗಳ ನೋಟರಿ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಮೂಲ ದಾಖಲೆಗಳ ಜೊತೆ ಪರಿಶೀಲಿಸಿದ ನಂತರ ಸದರಿ ದಾಖಲೆಗಳು ದಿನ ಬಳಕೆಗೆ ಬೇಕಾಗಿರುವುದರಿಂದ ಅವುಗಳ ನೋಟರಿ ಪ್ರತಿಗಳನ್ನು ನಿ ಪಿ–14 ರಿಂದ ನಿ ಪಿ– 16 ಎಂದು ಗುರುತಿಸಲಾಯಿತು. ಅರ್ಜಿದಾರರ ಮೂಲ ಆದಾರ ಕಾರ್ಡ, ಪ್ಯಾನ್ ಕಾರ್ಡ, ಬ್ಯಾಂಕ್ ಪಾಸ್ ಬುಕ್ ಗಳನ್ನು ಅರ್ಜಿದಾರರಿಗೆ ಹಿಂದುರಿಗಿಸಲಾಯಿತು.

**ಈ ಹಂತದಲ್ಲಿ ಮುಂದಿನ ಮುಖ್ಯ ವಿಚಾರಣೆಗೆ ಸಮಯವಕಾಶ ಕೋರಿದ್ದರಿಂದ ಸಮಯ ನೀಡಿ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/–

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.